ಭಾನುವಾರ 7.10.2018
• ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ
ಸಂಪುಟ 52 • ಸಂಚಿಕೆ 278 • ಪುಟ 12+4 • ಬೆಲೆ ₹ 6
epaper.kannadaprabha.in

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಕಾಂಗ್ರೆಸ್ ಜತೆ ಸಮಾಜವಾದಿ ಪಕ್ಷದ ಮೈತ್ರಿಯೂ ಇಲ್ಲ? ↘9

CENTRAL LIBRARY

ಇಂದಿನಿಂದ ಪ್ರೊ ಕಬಡ್ಡಿ 6ನೇ ಆವೃತ್ತಿ: ಬೆಂಗಳೂರು ಚರಣ ಪುಣೆಗೆ ಸ್ಥಳಾಂತರ? ↘11



ಭಾನುಪ್ರಭ



ಸಂಸಾರಸ್ಥೆಯರ ಲೋಕ ಸಂಚಾರ

ಹಲವು ಕಾರಣಗಳಿಗಾಗಿ ಗುಂಪು ಕಟ್ಟಿ ಅಥವಾ ಒಬ್ಬಂಟಿಯಾಗಿ ಪ್ರವಾಸ ಮಾಡುವ ಮಹಿಳೆಯರ ಅನುಭವ ಕಥನ



# ಸಹ್ಯಾದ್ರಿ ಕಾಲೇಜಿಗೆ ಕೇಂದ್ರದ ಮಾನ್ಯತೆ

KP



ಸಹ್ಯಾದ್ರಿ ಕಾಲೇಜಿನ ದೃಶ್ಯ.

**ಮಂಗಳೂರು:** ಕೇಂದ್ರದ ಅಪೆಕ್ಸ್ ಬಾಡಿ ಗುರುತಿಸಿರುವ ರಾಜ್ಯದ ಕೆಲವೇ ಕಾಲೇಜುಗಳಲ್ಲಿ ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು ಕೂಡ ಒಂದು. ಇದರಿಂದಾಗಿ ಈ ಕಾಲೇಜಿನಲ್ಲಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ನಡೆಸುವ ಪ್ರಾಯೋಜಿತ ಯೋಜನೆಗಳಿಗೆ ಅನುದಾನ ರೂಪದಲ್ಲಿ ಕೇಂದ್ರ ಸರ್ಕಾರದ ನೆರವು ಪಡೆಯುವ ಅರ್ಹತೆ ಹೊಂದಿದೆ.

ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜ್ ಯುಜಿಸಿ ಕಾಯಿದೆ, 1956ರ ಸೆಕ್ಷನ್ 12(ಬಿ) ಅಡಿಯಲ್ಲಿ ರಚಿಸಲಾದ ನಿಯಮಗಳ ಆಧಾರದಲ್ಲಿ ಕೇಂದ್ರ ನೆರವು ಪಡೆಯಲು ಅರ್ಹವಾಗಿದೆ ಎಂದು ಘೋಷಿಸಲ್ಪಟ್ಟಿದೆ. ತಾಂತ್ರಿಕ ಶಿಕ್ಷಣ ಮತ್ತು ಶೈಕ್ಷಣಿಕ ಯೋಜನೆಗಳಿಗೆ ಸಂಬಂಧಿಸಿದಂತೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದೀಗ ರಾಜ್ಯ ಸರ್ಕಾರದ ನೆರವಿನಲ್ಲಿ ಯುಜಿಸಿ ಬೆಂಬಲವನ್ನು ಸಹ ಪಡೆಯ ಬಹುದಾಗಿದೆ. ಈ ಗುರುತಿಸುವಿಕೆ ಸಹ್ಯಾದ್ರಿ ಕಾಲೇಜಿನಲ್ಲಿ ಇರುವ ಮೂಲಭೂತ ಸೌಕರ್ಯ, ಶೈಕ್ಷಣಿಕ ಸೌಲಭ್ಯಗಳನ್ನು ಮತ್ತು ವಿದ್ಯಾರ್ಥಿಗಳಿಗೆ ನೀಡಲಾಗುವ ಉನ್ನತ ಶಿಕ್ಷಣವನ್ನು ಆಧರಿಸಿ ನೀಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.